ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. L.No.19175 /93-94
ESTD: 1994
ಕೇಂದ್ರ ಕಛೇರಿ: 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003. ದೂರವಾಣಿ-2492275
Website: www.ramakrishnacredit.com E-mail: ho@ramakrishnacredit.com

# ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ

ಸಿಬ್ಬಂದಿ ನೇಮಕಾತಿ ಸಮಿತಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. ಮಂಗಳೂರು ಇವರು ಅರ್ಹ ಅಭ್ಯರ್ಥಿಗಳಿಂದ ವಿವಿಧ ಹುದ್ದೆಗಳಿಗೆ ನಿಗದಿತ ನಮೂನೆಗಳಲ್ಲಿ ಅರ್ಜಿಗಳನ್ನು ಅಹ್ವಾನಿಸಿದೆ. ಈ ನೇಮಕಾತಿಯು ಸಂಘದ ಉಪನಿಯಮ, ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಹಾಗೂ ನಿಯಮ 1960ರ ಉಪಬಂಧಗಳಿಗೆ ಒಳಪಟ್ಟಿದ್ದು, ಅರ್ಜಿ ಆಹ್ವಾನಿಸಲಾದ ಹುದ್ದೆಯ ಪದನಾಮ, ಹುದ್ದೆಗಳ ಸಂಖ್ಯೆ, ವಿದ್ಯಾರ್ಹತೆ ಹಾಗೂ ಮೀಸಲಾತಿ ಮತ್ತಿತರ ಶರ್ತಗಳು/ ಸೂಚನೆಗಳು ವಿವರಗಳು ಈ ಕೆಳಗಿನಂತಿದೆ.

| ಕ್ರ. ಸಂ. | ಹುದ್ದೆಯ ಪದನಾಮ | ಒಟ್ಟು ಹುದ್ದೆಗಳ ಸಂಖ್ಯೆ | ಮೀಸಲಾತಿ | | | | ವಿದ್ಯಾರ್ಹತೆ |
|---|---|---|---|---|---|---|---|
| | | | ಸಾಮಾನ್ಯ | ಇತರ ಹಿಂದುಳಿದ ಜಾತಿ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | |
| 1. | **ಅಕೌಂಟೆಂಟ್**<br>ವೇತನ ಶ್ರೇಣಿ<br>34175-725(1)-<br>34900-750(1)-<br>35650-850(4)-<br>39050-950(4)-<br>42850-1050(4)-<br>47050-1175(2)-<br>49400-1250(2)-<br>51900-1300(2)-<br>54500 | 25 | 25 | – | – | – | 1) ಭಾರತದ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಯಾವುದೇ ವಿಶ್ವವಿದ್ಯಾನಿಲಯ ದಿಂದ ವಾಣಿಜ್ಯ/ಸಹಕಾರ/ನಿರ್ವಹಣೆ ವಿಷಯದಲ್ಲಿ ಪಡೆದ ಬಿ.ಕಾಂ/ ಬಿಬಿಎಂ/ಬಿಬಿಎ ಪದವಿಯಲ್ಲಿ ಕನಿಷ್ಠ ಶೇ.70 ಅಂಕಗಳು ಪಡೆದು ಪದವೀಧರರಾಗಿರಬೇಕು. ಸದ್ರಿ ಪದವಿಯೊಂದಿಗೆ ಎಂ.ಕಾಂ. ಎಂಬಿಎ (ಮೇನೇಜ್‌ಮೆಂಟ್, ಫೈನಾನ್ಸ್) ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ದರ್ಜೆಯ ಅಂಕಗಳನ್ನು ಹೊಂದಿದ ಪದವೀಧರರಿಗೆ ಆದ್ಯತೆ ನೀಡಲಾಗುವುದು.<br>2) ಕಂಪ್ಯೂಟರ್ ಜ್ಞಾನ<br>a) ಕಂಪ್ಯೂಟರ್ ಆಪರೇಷನ್ಸ್ ಬಗ್ಗೆ ಕನಿಷ್ಠ 6 ತಿಂಗಳ ಅವಧಿಯ ಕಂಪ್ಯೂಟರ್ ಕೋರ್ಸ್ ಮಾಡಿರಬೇಕು ಮತ್ತು<br>b) ಅಪ್ಲಿಕೇಷನ್ ಜ್ಞಾನದ ಜೊತೆಗೆ ಟ್ಯಾಲಿ ಕೋರ್ಸ್‌ನ ತೇರ್ಗಡೆ ಪತ್ರವನ್ನು ಹೊಂದಿರಬೇಕು<br>ಮತ್ತು<br>3) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಬ್ಯಾಂಕ್/ಸಹಕಾರಿ ಬ್ಯಾಂಕ್/ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯಲ್ಲಿ ಕ್ಲರ್ಕ್ ಅಥವಾ ಅದಕ್ಕಿಂತ ಮೇಲ್ಪಟ್ಟ ಹುದ್ದೆಗಳಲ್ಲಿ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿರುವ ಅನುಭವ ಇರುವವರಿಗೆ ಆದ್ಯತೆ ನೀಡಲಾಗುವುದು. |
| 2. | **ಕ್ಲರ್ಕ್**<br>ವೇತನ ಶ್ರೇಣಿ<br>30125-650(4)-<br>32725-725(3)-<br>34900-750(1)-<br>35650-850(4)-<br>39050-950(4)-<br>42850-1050(4)-<br>47050-1175(2)-<br>49400-1250(2)-<br>51900 | 24 | 19 | 2 | 2 | 1 | 1) ಭಾರತದ ಕಾನೂನಿನಿಂದ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ ಕನಿಷ್ಠ ಶೇ.65 ಅಂಕಗಳು ಪಡೆದು ತೇರ್ಗಡೆಯಾಗಿರಬೇಕು,<br>2) ಕಂಪ್ಯೂಟರ್ ಆಪರೇಷನ್ಸ್ ಬಗ್ಗೆ 6 ತಿಂಗಳ ಅವಧಿಯ ಕಂಪ್ಯೂಟರ್ ಕೋರ್ಸ್ ಮಾಡಿರಬೇಕು ಮತ್ತು ಅಪ್ಲಿಕೇಷನ್ ಜ್ಞಾನ ಹೊಂದಿರಬೇಕು<br>ಮತ್ತು<br>3) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |

1. **ವಯೋಮಿತಿ :** ಅರ್ಜಿ ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ 30.09.2025ಕ್ಕೆ ಅರ್ಹ ಅಭ್ಯರ್ಥಿಗಳ ಕನಿಷ್ಠ ವಯೋಮಿತಿಯು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ 18 ವರ್ಷ ಆಗಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯು a) ಸಾಮಾನ್ಯ ವರ್ಗ –35 ವರ್ಷ, b) ಇತರ ಹಿಂದುಳಿದ ಜಾತಿ – 38 ವರ್ಷ, c) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ – 40 ವರ್ಷ ಮೀರತಕ್ಕದ್ದಲ್ಲ.
2. ಸಂಪೂರ್ಣ ಮಾಹಿತಿ ಒಳಗೊಂಡಿರದ ಹಾಗೂ ಅಗತ್ಯ ಪ್ರಮಾಣ ಪತ್ರಗಳು/ ಭಾವಚಿತ್ರಗಳು/ ಅರ್ಜಿ ಶುಲ್ಕವಿಲ್ಲದ ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು, ಯಾವುದೇ ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.
3. ಸಂಘದ 29 ಶಾಖೆಗಳಾದ ಮಂಗಳೂರಿನ ಬಂಟ್ಸ್ ಹಾಸ್ಟೆಲ್, ಚಿಲಿಂಬಿ, ಸುರತ್ಕಲ್, ವೆಲೆನ್ಸೀಯಾ, ಹಂಪನಕಟ್ಟೆ, ತೊಕ್ಕೊಟ್ಟು, ಪಡೀಲ್ ಶಾಖೆಗಳಲ್ಲಿ, ಸುಳ್ಯ, ಪುತ್ತೂರು, ಬಿ.ಸಿ.ರೋಡ್, ವಿಟ್ಲ, ಬೆಳ್ತಂಗಡಿ, ಉಪ್ಪಿನಂಗಡಿ, ಕಡಬ, ಬೆಳ್ಳಾರೆ, ಸವಣೂರು, ಮುಡಿಪು, ಗುರುಪುರ ಕೈಕಂಬ, ಮುಲ್ಕಿ, ಮೂಡಬಿದ್ರಿ, ಉಡುಪಿಯ ಉಡುಪಿ ಮತ್ತು ಉಡುಪಿ ನಗರ ಶಾಖೆಗಳು, ಶಿರ್ವ, ಬ್ರಹ್ಮಾವರ, ಕುಂದಾಪುರ, ಬೈಂದೂರು, ಕಾರ್ಕಳ, ಹೆಬ್ರಿ, ಹಿರಿಯಡ್ಕ ಶಾಖೆಗಳಲ್ಲಿ ಅರ್ಜಿಯನ್ನು ವಿತರಿಸಲಾಗುವುದು.
4. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಹಂತದಲ್ಲಿ, ಯಾವುದೇ ಕಾರಣ ನೀಡದೆ ಹಿಂದಕ್ಕೆ ಪಡೆಯುವ/ ರದ್ದುಪಡಿಸುವ ಅಧಿಕಾರವನ್ನು **ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.**, ಇದರ ಸಿಬ್ಬಂದಿ ನೇಮಕಾತಿ ಸಮಿತಿಯು ಹೊಂದಿರುತ್ತದೆ. ಇಂತಹ ಸಂದರ್ಭಗಳಲ್ಲಿ ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ ಅಥವಾ ಇನ್ನಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
5. ಸಾಮಾನ್ಯ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ ರೂ.500/–ರಂತೆ ಆಗಿರುವುದು ಮತ್ತು **SC/ST** ಅಭ್ಯರ್ಥಿಗಳು ಪಾವತಿಸಬೇಕಾದ **ಅರ್ಜಿ ಶುಲ್ಕ ರೂ.**250/– ಆಗಿರುವುದು.
6. ಅಭ್ಯರ್ಥಿಗಳ ಅರ್ಹತೆ ಬಗ್ಗೆ ನೇಮಕಾತಿ ಸಮಿತಿಯ ಶಿಫಾರಸ್ಸು ಅಂತಿಮವಾಗಿರುತ್ತದೆ. ಅಂತಿಮ ಆಯ್ಕೆಯು ಆಡಳಿತ ಮಂಡಳಿಯ ಅನುಮೋದನೆಗೆ ಒಳಪಟ್ಟಿರುತ್ತದೆ.
7. ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಹಾಕಬಯಸುವ ಅಭ್ಯರ್ಥಿಗಳು ಆಯಾಯ ಹುದ್ದೆಗೆ ನಿಗದಿತ ನಮೂನೆಯಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
8. ನೇಮಕಾತಿಯ ಷರತ್ತು ಸೂಚನೆಗಳನ್ನು ನೇಮಕಾತಿ ಅರ್ಜಿಯಲ್ಲಿ ನಮೂದಿಸಲಾಗಿದೆ.
9. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 30.09.2025.

**(ಸಿಬ್ಬಂದಿ ನೇಮಕಾತಿ ಸಮಿತಿಯ ನಿರ್ಣಯದಂತೆ)**

ಸಹಿ/–
ಸದಸ್ಯ ಕಾರ್ಯದರ್ಶಿ
ಸಿಬ್ಬಂದಿ ನೇಮಕಾತಿ ಸಮಿತಿ
ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.
ಮಂಗಳೂರು

ದಿನಾಂಕ :15.09.2025
ಸ್ಥಳ : ಮಂಗಳೂರು